ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೊತ್ತ

620 (814) ಶ್ರೀ ವಸಂತಬಂಗೇರ. ಕೆ. (ಬೆಳ್ತಂಗಡಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಕೇಂದ್ರ ಸರ್ಕಾರದಿಂದ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಮೊತ್ತ ಎಷ್ಟು? ಹಾಗೂ ಬಿಡುಗಡೆಯಾದ ಮೊತ್ತದಲ್ಲಿ ವೆಚ್ಚ ಮಾಡಲಾಗಿರುವ ವಿವರಗಳನ್ನು ಒದಗಿಸುವುದು?

ಶ್ರೀ ಸಿ.ಪಿ. ಯೋಗೇಶ್ವರ (ಅರಣ್ಯ ಸಚಿವರು) :

ಕೇಂದ್ರ ಸರ್ಕಾರದ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, 2009-10, 2010-11 ಮತ್ತು 2011-12ನೇ ಸಾಲಿನವರೆವಿಗೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ಯಾಗಿರುವ ಮೊತ್ತ ಮತ್ತು ಖರ್ಚು ಭರಿಸಲಾದ ವೆಚ್ಚದ ವಿವರಗಳನ್ನು ಈ ಕೆಳಕಂಡಂತೆ ಸೂಚಿಸಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಯೋಜನೆಯ ಹೆಸರು	ವರ್ಷ	ಬಿಡುಗಡೆಯಾದ ಮೊತ್ತ	ಖರ್ಚು ಭರಿಸಲಾದ ಮೊತ್ತ	ಷರಾ
1	ರಾಷ್ಟ್ರೀಯ ಅರಣ್ಯೀಕರಣ ಯೋಜನೆ	2009-10	2249.339	1488.875	-
		2010-11	1580.994	133.674	
		2011-12	1538.05	1429.86	
		ಒಟ್ಟು	**5368.474**	**4253.409**	
2	ಬಿದಿರು ಯೋಜನೆ	2009-10	323.07	471.870	ಕಳೆದ ಸಾಲಿನಲ್ಲಿ ಅನುಮೋದನೆಗೊಂಡಿದ್ದ ಕಾಮಗಾರಿಗಳಿಗೆ ವೆಚ್ಚ ಭರಿಸಲಾಗಿದೆ.
		2010-11	422.00	410.047	
		2011-12	375.00	437.327	
		ಒಟ್ಟು	**1120.07**	**1319.944**	
3	ಕಾಂಡ್ಲವನ ಸಂರಕ್ಷಣೆ ಯೋಜನೆ	2009-10	15.00	---	ಪುನರ್ ಅನುಮೋದನೆ ಪಡೆದ ಖರ್ಚು ಭರಿಸಿದೆ.
		2010-11	---	15.00*	
		2011-12	43.80	43.80	
		ಒಟ್ಟು	**58.80**	**58.80**	
4	ಔಷಧಿ ಸಸ್ಯಗಳ ಯೋಜನೆ	2011-12	56.00	2.00	ಈ ಯೋಜನೆಯು 2011-12ನೇ ಸಾಲಿನಿಂದ
5	ಗ್ರೀನ್	2011-12	268.95	1.50	

	ಇಂಡಿಯಾ ಮಿಷನ್				ಪ್ರಾರಂಭವಾಗಿರುತ್ತದೆ ಮಾರ್ಚ್ ಅಂತ್ಯಕ್ಕೆ ಹಣ ಬಿಡುಗಡೆಯಾಗಿರುವುದರಿಂದ ಮುಂದಿನ ಸಾಲಿನಲ್ಲಿ ಹಣವನ್ನು ಖರ್ಚು ಮಾಡಲಾಗುವುದು.
6	12ನೇ ಆರ್ಥಿಕ ಆಯೋಗ	2009–10	1298.735	1296.08	
7	13ನೇ ಆರ್ಥಿಕ ಆಯೋಗ	2010–11 2011–12	2763.00 2763.00	2741.16 2713.59	
8	ಕೇಂದ್ರ ಪುರಸ್ಕೃತ ಇಂಟೆನ್ಸಿಫಿಕೇಷನ್ ಆಫ್ ಫಾರೆಸ್ಟ್ ಮ್ಯಾನೇಜ್ ಮೆಂಟ್	2009–10 2010–11 2011–12	262.429 255.758 411.36	212.281 193.038 375.00	2007–08, 2008–09, 2009–10, 2010–11ನೇ ಸಾಲಿನ ರಿವ್ಯಾಲಿಡೇಷನ್ ಮಾಡಿದ ಮೊತ್ತ ಸೇರಿದೆ.
9	ಹುಲಿ ಯೋಜನೆ	2009–10 2010–11 2011–12	755.025 1409.113 2152.182	699.040 1406.920 2119.084	2008–09, 2009–10, 2010–11ನೇ ಸಾಲಿನ ರಿವ್ಯಾಲಿಡೇಷನ್ ಮಾಡಿದ ಮೊತ್ತ ಸೇರಿದೆ.
10	ಕೇಂದ್ರ ಪುರಸ್ಕೃತ ಸಮಗ್ರ ವನ್ಯಜೀವಿ ಆವಾಸ್ ಸ್ಥಾನಗಳ ಅಭಿವೃದ್ಧಿ–139–ಪ್ರಧಾನ ಕಾಮಗಾರಿಗಳು	2009–10 2010–11 2011–12	659.205 455.965 360.712	630.900 411.689 357.813	2008–09, 2009–10, 2010–11ನೇ ಸಾಲಿನ ರಿವ್ಯಾಲಿಡೇಷನ್ ಮಾಡಿದ ಮೊತ್ತ ಸೇರಿದೆ.
11	ಆನೆ ಯೋಜನೆ	2009–10 2010–11 2011–12	283.110 305.08 237.17	278.786 290.542 235.662	2008–09, 2009–10, 2010–11ನೇ ಸಾಲಿನ

					ರಿವ್ಯಾಲಿಡೇಷನ್ ಮಾಡಿದ ಮೊತ್ತ ಸೇರಿದೆ.
12	ನೀಲಗಿರಿ ಬಯೋಸ್ಪಿಯರ್ ಗಳ ರಕ್ಷಣೆ	2009–10 2010–11	109.790 24.060	109.731 12.790	2008–09, 2009–10, 2010–11ನೇ ಸಾಲಿನ ರಿವ್ಯಾಲಿಡೇಷನ್ ಮಾಡಿದ ಮೊತ್ತ ಸೇರಿದೆ.
13	ಅರಣ್ಯ ವ್ಯಾಪ್ತಿಯ ಪುನರುತ್ಥಾನ (ಎಪಿಆರ್ಆರ್ ಎಫ್ಸಿ)	2010–11 2011–12	294.69 ---	294.67 ---	

ಸಂಖ್ಯೆ: ಅಪಜೀ 54 ಎಫ್ಟಿಎಸ್ 2012.

ಅರಣ್ಯದ ಹದ್ದುಬಸ್ತು

570 (350) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಸಾವಿರ ಎಕರೆ ಪರಿಗಣಿತ, ಕಾನ್, ಮೀಸಲು, ಸುರಕ್ಷಿತ, ಸಿ ಮತ್ತು ಡಿ, ಎಂ.ಎಫ್, ಎಸ್.ಎಫ್, ಆರ್.ಎಫ್, ಪಿ.ಎಫ್, ಗ್ರಾಮ ಅರಣ್ಯವಿದೆ. ಅದನ್ನು ಅಳತೆ ಮಾಡಿ ಹದ್ದು ಬಸ್ತು ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ ಕಲ್ಲು ಬಾಂದು ಹಾಕಿದ ಗ್ರಾಮ ಸರ್ವೆ ನಂ. ವಿಸ್ತೀರ್ಣ, ಟಿಪ್ಪಣಿ ಸಹಿತ ವಿವರ ಒದಗಿಸುವುದು;

ಇ) ಅಳತೆ ಮಾಡದೇ ಇದ್ದಲ್ಲಿ ಕಾರಣಗಳೇನು; ಹಾಲಿ ಗಡಿ ಗುರುತಿಸಿಕೊಳ್ಳಲು ಅನುಸರಿಸಲಾಗುತ್ತಿರುವ ಕ್ರಮಗಳೇನು; (ಪೂರ್ಣ ವಿವರ ಒದಗಿಸುವುದು);

ಈ) ಗ್ರಾಮಾಂತರ ಕ್ಷೇತ್ರದಲ್ಲಿರುವ ಸುಮಾರು 1,73,000 ಚದರ ಕಿ.ಮೀ ವಿಸ್ತೀರ್ಣದ ಅರಣ್ಯ ಪ್ರದೇಶದಲ್ಲಿ 1928 ಕ್ಕಿಂತ ಮುಂಚೆ ಇದ್ದ